ಓ ಎಸ್. .ನಂ. 14/11
ಪಿ.ಡಬ್ಲ್ಯೂ-02

<u>ಸಾಕ್ಷಿಯನ್ನು ದಿಃ **07.11.2023** ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಗಳ ಪರ ಶ್ರೀ.ಎಂ.ಜಿ .ವಕೀಲರಿಂದ.</u>

ನಮ್ಮ ತಂದೆಯ ಸೇವಾ ಪುಸ್ತಕವನ್ನು ತಂದಿದ್ದಿರಾ ಎಂದರೆ ಸಾಕ್ಷಿ ಪಿಂಚಣಿ ಪುಸ್ತಕದ ಜರಾಕ್ಸ್ ಇದ್ದು ಅದನ್ನು ವಕೀಲರಿಗೆ ನೀಡಿದ್ದೇನೆ ಎಂದು ಹೇಳುತ್ತಾರೆ. ಸದರಿ ದಾಖಲೆಯನ್ನು ಹೊರತು ಪಡಿಸಿ ನನ್ನ ತಂದೆ ನಮ್ಮನ್ನು ಶಾಲೆಗೆ ಸೇರಿಸುವಾಗ ಮಾಡಿರುವ ಸಹಿಯನ್ನು ನೋಡಿರುತ್ತೇನೆ. ಸಿದ್ದಲಿಂಗಯ್ಯ ಅವರ ತಂದೆ ತಿರುಮಲಯ್ಯ ಆಗಿದ್ದು ಸಾಕ್ಷಿಗೆ ಈ ಹಂತದಲ್ಲಿ ವಂಶವೃಕ್ಷವನ್ನು ತೋರಿಸಿ ಸದರಿ ವಂಶವೃಕ್ಷ ಪ್ರತಿವಾದಿ 7 -13 ರ ವರೆಗೆ ಸೇರಿದ್ದು ಎಂದು ಹೇಳಿದಾಗ ಒಪ್ಪಿರುತ್ತಾರೆ. ಕಾರಣ ಸದರಿ ದಾಖಲೆಯನ್ನು ನಿ.ಡಿ 2 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಕ್ರಯ ಪತ್ರದ ದೃಢಿಕೃತ ನಕಲನ್ನು ತೋರಿಸಿ ಸಿದ್ದಲಿಂಗಯ್ಯ ಅವರಿಗೆ ಬೆಟ್ಟಪ್ಪ ಅವರು ಬರೆಸಿ ಕೊಟ್ಟ ದಾಖಲೆಯಾಗಿದ್ದು ಅದನ್ನು ನಾನು ಪ್ರಶ್ನೆ ಮಾಡಿರುತ್ತೇನೆ ಎಂದರೆ ಸರಿ. ಸದರಿ ಸ್ವತ್ತು ಸಿ ಸ್ಕೆಡ್ಯೂಲ್ ನಲ್ಲಿ ಇರುತ್ತದೆ. ಸದರಿ ದಾಖಲೆಯನ್ನು ಸಾಕ್ಷಿ ಒಪ್ಪಿದ್ದರಿಂದ ನಿ.ಡಿ 3 ಎಂದು ಗುರುತಿಸಲಾಯಿತು. ದಿಃ 01.03.74 ರಂದು ಆದ ಬೋಗ್ಯ ಪತ್ರ ಆಗಿದ್ದು ಅದರ ದೃಢಿಕೃತ ನಕಲನ್ನು ಸಾಕ್ಷಿ ನಾನು ನೊಡಿಲ್ಲ ಎಂದು ಹೇಳುತ್ತಾರೆ. ನಾನು ಹಾಜರು ಪಡಿಸಿರು ನಿ.ಪಿ 10 ರಲ್ಲಿ ತೋರಿಸಿರುವ ಬೋಗ್ಯ ಪತ್ರ ಮೇಲೆ ಹೇಳಿದ ದಾಖಲೆ ಆಗಿರುತ್ತದೆ ಎಂದರೆ ನಾನು ನೋಡಿಲ್ಲ ಎಂದು ಹೇಳುತ್ತಾರೆ.

ಸಾಕ್ಷಿಗೆ ಸ ನಂ 147/2 ಒಟ್ಟು 28 ಪಹಣಿ ಪತ್ರಿಗಳನ್ನು ತೋರಿಸಿ ಅವು ದಾವಾ ಸ್ವತ್ತಿನ ಸಿ ಸ್ಕೆಡ್ಯೂಲ್ ಪಹಣಿ ಪತ್ರಿಗೆಗಳಾಗಿದ್ದು ಸಿದ್ದಲಿಂಗಯ್ಯ ಅವರಿಗೆ ಹೆಸರಿಗೆ ಇರುತ್ತವೆ ಎಂದರೆ ಸರಿ. ಸಾಕ್ಷಿ ಸದರಿ ದಾಖಲೆಗಳನ್ನು ಒಪ್ಪಿರುವುದರಿಂದ ಅವು ನಿ.ಡಿ **4 – 31** ಎಂದು ಗುರುತಿಸಲಾಯಿತು. ಸಿದ್ದಲಿಂಗಯ್ಯ ಅವರ ಹೆಸರಿಗೆ ಕ್ರಯದ ಆದಾರ ಮೇರೆಗೆ ಮ್ಯೂಟೇಷನ್ ಆಗಿ ಬಂದಿರುತ್ತದೆ ಸಾಕಿಃ ಮುಂದುವರೆದು ಅದರ ಕ್ರಯ ವಾಗಿಲ್ಲ ವೆಂದು ಹೇಳುತ್ತಾರೆ. ಸಾಕ್ಷಿಗೆ 1 ಎಂ.ಆರ್ ನು ದೃಡಿಕೃತ ನಕಲನ್ನು ತೋರಿಸಿ ಅದೇ ಎಂ. ಆರ್ ನಲ್ಲಿ ಸಿದ್ದಲಿಂಗಯ್ಯ ಅವರ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸಾಕ್ಷಿ ಒಪ್ಪಿಕೊಂಡಿರುತ್ತಾನೆ. ಸದರಿ ದಾಖಲೆಯನ್ನು ನಿ.ಡಿ 32 ಎಂದು ಗುರುತಿಸಲಾಯಿತು. ನಾನು ಮತ್ತು ನನ್ನ ತಮ್ಮ ಪ್ರತಿವಾದಿ ಸಿದ್ದಲಿಂಗಯ್ಯ ಅವರ ಹಸರಿಗೆ ಆಗಿರುವ ಎಂ.ಆರ್. ಮತ್ತು ಪಹಣಿ ಪತ್ರಿಕೆಗಳನ್ನು ಪ್ರಶ್ನೆಯಾಗಿ ಎ.ಸಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇನೆ. ಮೇಲ್ಮನವಿ ಸಲ್ಲಿಸಿರು ಕುರಿತು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ವಕೀಲರಿಗೆ ನೀಡಿದ್ದೇನೆ ಎಂದು ಹೇಳುತ್ತಾರೆ.

ನಿಮ್ಮ ತಂದೆ ಜಿವಂತ ಇದ್ದಾಗ ಪ್ರತಿವಾದಿಗಳ ಹೆಸರಿಗೆ ಪಹಣಿ ಪತ್ರಿಕೆ ಬರುವ ವಿಷಯ ಗೊತ್ತಿತ್ತಾ ಎಂದರೆ ಸಾಕ್ಷಿ ನನ್ನ ತಾತ ಗೌಡಯ್ಯ ಅವರ ಹೆಸರಿಗೆ ಪಹಣಿ ಪತ್ರಿಕೆ ಬರುತ್ತಿತ್ತು ಎಂದು

ಅವರು ಭಾವಿಸಿದ್ದರು ಎಂದು ನುಡಿಯುತ್ತಾರೆ. ನಿಮ್ಮ ತಂದೆ ಅವರ ಜೀವಿತ ಅವಧಿಯಲ್ಲಿ ಕ್ರಯ ಪತ್ರ ಎಂ. ಆರ್. ಮತ್ತು ಪಹಣಿ ಪತ್ರಿಕೆಗಳನ್ನು ಪ್ರಶ್ನೆ ಮಾಡಿಲ್ಲಾ ಎಂದರೆ ಸರಿ.

ಸಿದ್ದಲಿಂಗಯ್ಯ ಅವರ ಹೆಸರಿಗೆ ಪಹಣಿ ಪತ್ರಿಕೆ ಆದ ವಿಷಯನಿಮಗೆ ಯಾವಾಗ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿ 2010 ರಲ್ಲಿ ನಮ್ಮ ತಂದೆ ಉಳುಮೆ ಮಾಡಲು ನೀಡಿದ ಜಮೀನನ್ನು ಕೇಳಲು ಹೋದಾಗ ಪ್ರತಿವಾದಿಗಳು ಅವರ ಹೆಸರಿಗೆ ಕ್ರಯ ಪತ್ರವಾದ ವಿಷಯ ತಿಳಿಸಿರುತ್ತಾರೆ. ಆಗ ನಮಗೆ ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ. ಸಿದ್ದಲಿಂಗಯ್ಯ ಅವರ ಕುಟುಂಬದರನ್ನು ನಾನು ಮತ್ತು ಇತರ ವಾದಿಗಳು ಕೇಳಿರುತ್ತೇವೆ. ನಿವಾಗಲಿ ನಿಮ್ಮ ತಂದೆಯಾಗಲಿ ಸ್ವಾಧೀನವನ್ನು ಬಿಡಿಸಿ ಕೊಡುವ ಬಗ್ಗೆ ಪೋಲಿಸರಿಗೆ ಮತ್ತು ಇತರ ಅಧಿಕಾರಿಗಳಿಗೆ ದೂರು ನೀಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ನಾವು ಸ್ವಾಧೀನವನ್ನು ಬಿಟ್ಟುಕೊಟ್ಟಿಲ್ಲಾ ಎಂದು ಹೇಳುತ್ತಾರೆ.

ಸಿದ್ದಲಿಂಗಯ್ಯ ಅವರಿಗೆ ಉಳುವೆ ಮಾಡಲು ಸಿ ಸ್ಕೆಡ್ಯೂಲ್ ಸ್ವತ್ತನ್ನು ನೀಡಿರುವುದಾಗಿ ನನ್ನ ತಂದೆ 2006-2007 ರಲ್ಲಿ ನನಗೆ ಹೇಳಿರುತ್ತಾರೆ. ನನ್ನ ತಂದೆ ಸರ್ಕಾರಿ ಸೇವೆಯಲ್ಲಿದ್ದು ಬುದ್ದಿವಂತರಾಗಿದ್ದರು ಮತ್ತು ಯಾರಿಗೂ ಮೋಸ ಮಾಡುತ್ತಿರಲಿಲ್ಲ ಎಂದರೆ ಸರಿ. ಸಿ ಶೇಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ನಿವಾಗಲಿ ನಿಮ್ಮ ತಂದೆಯಾಗಲಿ ಕಂದಾಯವನ್ನು ಕಟ್ಟಿದ್ದೀರಾ ಎಂದರೆ ಸಾಕ್ಷಿ ನನ್ನ ತಂದೆ ಕಂದಾಯವನ್ನು ಕಟ್ಟಿದ್ದು ದಾಖಲೆಗಳು ಇಲ್ಲದಿರುವ ಕಾರಣ ಹಾಜರುಪಡಿಸಿಲ್ಲ ಎಂದು ಹೇಳುತ್ತಾರೆ.

ದಿಃ 24.05.76 ರಲ್ಲಿ ಕ್ರಯ ಪತ್ರ ಮಾಡುವ ಮೊದಲೇ ನನ್ನ ತಂದೆ ದಿಃ 01.03.74 ರಲ್ಲಿ ಬೋಗ್ಯ ಪತ್ರಮಾಡಿ ಜಮೀನಿನ ಸ್ವಾಧೀನ ಮಾಡಿ ಬಿಟ್ಟುಕೊಟ್ಟಿದ್ದರು ಎಂದರೆ ಸರಿಯಲ್ಲ. ಬೋಗ್ಯ ತಿಟುವಳಿ ಮಾಡಿಕೊಂಡು ಕ್ರಯ ಪತ್ರದ ಹಣವನ್ನು ಪಡೆದು 1976 ರಲ್ಲಿ ಕ್ರಯ ಪತ್ರ ಮಾಡಿಕೊಟ್ಟ ನಂತರ ನನ್ನ ತಂದಗೆ ಸಿ ಶೇಡ್ಯೂಲ್ ಸ್ವತ್ತಿನಲ್ಲಿ ಯಾವುದೇ ಸ್ವತ್ತು ಇರಲಿಲ್ಲ ಎಂದರೆ ಸರಿಯಲ್ಲ. 1976 ರ ಕ್ರಯ ಪತ್ರದ ಆಧಾರ ಮೇಲೆ ಸಿದ್ದಲಿಂಗಯ್ಯ ಅವರ ಹೆಸರಿಗೆ ಕಂದಾಯ ಅಧಿಕಾರಿಗಳು ಮೂಟೇಷನ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ಕ್ರಯದ ಮೂಲಕ ಪಡೆದ ನಂತರ ಸಿದ್ದಲಿಂಗಯ್ಯ ಮತ್ತು ಅವರ ಮಕ್ಕಳು ಮಾತ್ರ ಸದರಿ ಜಮೀನಿನ ಮಾಲಿಕರು ಆಗಿದ್ದು ಬೇರೆ ಯಾರಿಗೂ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಸಿ ಶೇಡ್ಯೂಲ್ ಸ್ವತ್ತನ್ನು ಹಣದ ಅವಶ್ಯಕತೆಗೆ ಮಾರಾಟ ಮಾಡಿದ್ದು ಆದ ಕಾರಣ ಪಹಣಿ ಪತ್ರಿಕೆಗಳನ್ನು ಮತ್ತು ಎಂ. ಆರ್. ಹಾಗೂ ಕ್ರಯಪತ್ರವನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆಗೆ ಒದು ಬರಹ ಬರುತ್ತಿರಲಿಲ್ಲ ಎಂದು ಹೇಳುತ್ತಾರೆ.

ಕ್ರಯ ಪತ್ರವಾದ ನಂತರ ಸಿದ್ದಲಿಂಗಯ್ಯ ಅವರು ಕಂದಾಯ ಕಟ್ಟುತ್ತಿದ್ದರು ನಂತರ ಅವರ ಮಕ್ಕಳು ಕಂದಾಯ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಕಂದಾಯ ರಶೀದಿ ತೋರಿಸಿ ಸದರಿ ಕಂದಾಯ ರಶೀದಿ ಪ್ರತಿವಾದಿಗಳು ಸಿ ಶೇಡ್ಯೂಲ್ ಸ್ವತ್ತಿಗೆ ಸಂಬದಿಸಿದಂತೆ ಕಟ್ಟಿರುತ್ತಾರೆ

ಎಂದರೆ ಸಾಕ್ಷಿ ಇತ್ತಿಚೀನ ಕಂದಾಯ ರಶೀದಿ ಆಗಿರುತ್ತದೆ ಎಂದು ಹೇಳುತ್ತಾರೆ. ಅದನ್ನು ನಿ.ಡಿ 33 ಎಂದು ಗುರುತಿಸಲಾಯಿತು. ಅದೇ ರೀತಿ ಪಟ್ಟೇ ಪುಸ್ತಕವು ಸಹ ಸಿದ್ದಲಿಂಗಯ್ಯ ಅವರ ಹೆಸರಿಗೆ ಇರುತ್ತದೆ ಎಂದರೆ ಸಾಕ್ಷಿ ಇತ್ತಿಚೀನ ದಾಖಲೆ ಆಗಿರುತ್ತದೆ ಎಂದು ಹೇಳುತ್ತಾರೆ. ಅದನ್ನು ನಿ.ಡಿ 34 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈ ಹಂತದಲ್ಲಿ ರಜಿಸ್ಟರ್ ಸಂ 76-77 ರ ಹೆಬ್ಬಟ್ಟಿನ ದೃಢಿಕೃತ ನಕಲನ್ನು ತೋರಿಸಲಾಗಿ ಒಪ್ಪಿಕೊಂಡಿದ್ದು ಅದನ್ನು ನಿ.ಡಿ 35 ಮತ್ತ ನೊಂದಾಣಾಧಿಕಾರಿಗಳು ನೀಡಿರುವ ಹಿಂಬರಹ 36 ಎಂದು ಗುರುತಿಸಲಾಯಿತು.

ಕ್ರಯ ಪತ್ರವನ್ನು ಯಾರೂ ಬರೆದು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಬೇರೆ ಯಾರೋ ಬರೆದು ಕೊಟ್ಟಿದ್ದಾರೆ ಎಂದು ಹೇಳುತ್ತಾರೆ ಈ ಬಗ್ಗೆ ಕ್ರಮ ಜರುಗಿಸಿದ್ದಿರಾ ಎಂದರೆ ಇಲ್ಲ ಎಂದು ಹೇಳುತ್ತಾರೆ. ನಾನು ಹೇಳುವಂತೆ ನನ್ನ ತಂದೆ ಯಾವಾಗಲೂ ಸಹ ಸಿ ಶೇಡ್ಯೂಲ್ ಸ್ವತ್ತನ್ನು ಸಿದ್ದಲಿಂಗಯ್ಯ ಅವರಿಗೆ ಉಳುಮೆ ಮಾಡಲು ನೀಡಿರಲಿಲ್ಲ ಎಂದರೆ ಸರಿಯಲ್ಲ. ನಮೆ ಕ್ರಯ ಪತ್ರವಾದ ವಿಷಯ ಗೊತ್ತಿದ್ದರು ಸಹ ಗೊತ್ತಿಲ್ಲಾ ಎಂದು ಸುಳ್ಳು ಕೇಸನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈಗಲೂ ಸಹ ಸಿ ಶೇಡ್ಯೂಲ್ ಸ್ವತ್ತಿನಲ್ಲಿ ಸಿದ್ದಲಿಂಗಯ್ಯ ಅವರ ವಾರಸುದಾರರು ಇದ್ದಾರೆ ಎಂದರೆ ಸಾಕ್ಷಿ ನಾವೇ ಇದ್ದೇವೆ ಎಂದು ಹೇಳುತ್ತಾರೆ. ವಾದ ಪತ್ರದಲ್ಲಿ ಸಿ ಶೇಡ್ಯೂಲ್ ನ ಸ್ವಾಧೀನವನ್ನು ಪ್ರತಿವಾದಿ 7 – 13 ಅವರಿಂದ ಬಿಡಿಸಿಕೊಡಬೇಕೆಂದು ಬರೆಯಲಾಗಿದ್ದು ಅದು ಸರಿ ಇದೆಯಾ ಎಂದರೆ ಸಾಕ್ಷಿ ಸಿದ್ದಲಿಂಗಯ್ಯ ಅವರ ವಾಸರುದಾರರೇ ಸ್ವಾಧೀನದಲ್ಲಿದ್ದಾರೆ ಎಂದು ಹೇಳುತ್ತಾರೆ. ಸಿದ್ದಲಿಂಗಯ್ಯ ಅವರಿಗೆ ಅವರ ಕುಟುಂಬದವರಿಗೆ ಆಗದವರ ಮಾತು ಕೇಳಿ ನಿ.ಪಿ 10 ದಾಖಲೆಗೆ ನನ್ನ ತಂದೆ ಸಹಿ ಮಾಡಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ 36 ಮತ್ತು ಕ್ರಯ ಪತ್ರದಲ್ಲಿರುವ ಸಹಿ ನನ್ನ ತಂದೆಯವರದ್ದೇ ಆಗಿದ್ದು ಕ್ರಯ ಪತ್ರವನ್ನು ಬೇರೆಯಾರೂ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನಗೆ ಮತ್ತು ಇರೆ ವಾದಿಗಳಿಗೆ ದಾವೆ ದಾಖಲು ಮಾಡಲು ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ ದಾವೆ ಗೋಸ್ಕರ ಸುಳ್ಳು ದಾವೆಯನ್ನು ಸೃಷ್ಟಿಮಾಡಿರುತ್ತೇವೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸಿದ್ದಲಿಂಗಯ್ಯ ಅವರ ವಾದರಸುದಾರರಿಗೆ ಸಿ ಶೇಡ್ಯೂಲ್ ಗೆ ಸಂಬಂಧಿಸಿದಂತೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ 4-6 ಪರ ವಕೀಲರು ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಮುಂದೊಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಧಂ
ಕುಣಿಗಲ್.